# ಟೀವಿ ಜನಪದ ಜೋಳಿಗೆ ಆದರೆ...



**ಮಾರುತೇಶ್**
**ಸಿರಿ ಕನ್ನಡ 'ಮತ್ತೆ ಮಾಯಾಮೃಗ'ದ ಆದಿತ್ಯ**

◆ **ಕಿರುತೆರೆಗೆ ರಂಗಭೂಮಿ ತರಬೇತಿ ತಾಣವೇ?**

ನನ್ನ ನಟನೆ ಎಂಬ ಪಯಣ ಆರಂಭ ಆಗಿದ್ದೇ ರಂಗಭೂಮಿಯಿಂದ. ಚಿಕ್ಕ ವಯಸ್ಸಿನಲ್ಲೇ ರಂಗಪ್ರೀತಿ ನನ್ನಲ್ಲಿ ಹುಟ್ಟಿತ್ತು. ಅದಕ್ಕೆ ಸರಿಯಾಗಿ 'ಬೆನಕ' ತಂಡ ನೆಲೆ ಕಲ್ಪಿಸಿ ಪೋಷಿಸಿದೆ. ಅಭಿನಯವನ್ನು ಕಲಿಯಲು ದೊಡ್ಡ ಅವಕಾಶ ರಂಗಭೂಮಿಯಲ್ಲಿದೆ. ಅದು ನಟನೆಯನ್ನು ಕಲಿಸುವ ಜೊತೆಗೆ ವ್ಯಕ್ತಿತ್ವವನ್ನೂ ಬೆಳೆಸುತ್ತದೆ. ನಟನೆ ಮಾತ್ರ ಅಲ್ಲದೆ, ಒಬ್ಬ ವ್ಯಕ್ತಿಯಾಗಿ ರೂಪುಗೊಳ್ಳಲು ಅದು ಒಳ್ಳೆಯ ತಾಣ ಎಂದು ಅನ್ನಿಸುತ್ತದೆ. ನಾಟಕದಲ್ಲಿ ಪುಟ್ಟ ಪಾತ್ರದಿಂದ ಪ್ರಮುಖ ಪಾತ್ರಗಳನ್ನೂ ನಿರ್ವಹಿಸಿದ್ದೇನೆ. 'ಮಗಳು ಜಾನಕಿ'ಯಲ್ಲಿ ಪ್ರಮುಖ ಪಾತ್ರವನ್ನು ಮಾಡಿದೆ. ಆ ಮೂಲಕ ಧಾರಾವಾಹಿ ಜಗತ್ತು ತೆರೆದುಕೊಂಡಿತು. ಇದರ ಜೊತೆ ಜೊತೆ 'ಅರಮನೆ ಗಿಣಿ', 'ಆಕಾಶ ದೀಪ'ದಲ್ಲೂ ಮಾಡಿದ್ದೇನೆ. ಇದರ ನಡುವೆ ಎರಡು ಸಿನಿಮಾಗಳಲ್ಲಿ ನಟಿಸಿದ್ದೇನೆ. ಒಟ್ಟಾರೆ ಈ ಪ್ರಯಾಣ ತುಂಬ ಖುಷಿ ಕೊಟ್ಟಿದೆ.

◆ **ನಟನೆ ಪ್ಯಾಶನ್ ಆಗಿದ್ದು ಹೇಗೆ?**

ಸಿನಿಮಾ ನೋಡಿ ಬೆಳೆದವನು ನಾನು. ಅದು ಸುಪ್ತವಾಗಿ ಏಕೆ ನಾನೂ ನಟಿಸಬಾರದು ಎನ್ನುವ ಆಸೆಯ ಬೀಜವನ್ನು ಬಿತ್ತಿತ್ತು. ಮೆಕ್ಯಾನಿಕಲ್ ವಿಭಾಗದಲ್ಲಿ ಎಂಜಿನಿಯರಿಂಗ್ ಮಾಡಿದೆ. ಏರೊಸ್ಪೇಸ್‌ನಲ್ಲಿ ಡಿಸೈನಿಂಗ್ ಮತ್ತು ಕ್ವಾಲಿಟಿ ಎಂಜಿನಿಯರ್ ಆಗಿ ಸ್ವಲ್ಪ ದಿನ ಕೆಲಸ ಮಾಡಿದೆ. ಆಗ ನಾಟಕ ಮಾಡಲು ಸಮಯ ಸಿಗ್ತಾ ಇರಲಿಲ್ಲ. ಈ ಕೊರಗು ಸಂಪೂರ್ಣ ರಂಗಭೂಮಿ ಕಡೆ ಮರಳಿ ಕರೆತಂದಿತು. ಮನಸಿಗೆ ಖುಷಿ ಕೊಡುವ ಕೆಲಸ ಮಾಡಬೇಕು ಎನ್ನುವ ನಿರ್ಧಾರ ಉದ್ಯೋಗವನ್ನು ಬಿಡುವಂತೆ ಮಾಡಿತು. ಎಲ್ಲ ಕ್ಷೇತ್ರದಲ್ಲಿಯೂ ಅದರದ್ದೇ ಆದ ಸವಾಲು ಇರುತ್ತವೆ. ಖುಷಿಯಾಗಿ ಇರುವುದು ಮುಖ್ಯ, ಇಲ್ಲಿ ನೆಲೆ ಕಾಣುತ್ತೇನೆ ಎನ್ನುವ ವಿಶ್ವಾಸದಿಂದ ಇದನ್ನೇ ವೃತ್ತಿಯನ್ನಾಗಿ ಮಾಡಿಕೊಂಡೆ.

◆ **'ಮತ್ತೆ ಮಾಯಾಮೃಗ' ಮೂರು ಟ್ರ್ಯಾಕ್‌ನಲ್ಲಿ ಸಾಗುತ್ತಿದೆ. ಇದು ಒಟ್ಟಾರೆ ಕಥಾ ಹಂದರಕ್ಕೆ ಹೇಗೆ ಹೊಂದಿಕೆಯಾಗುತ್ತದೆ?**

ಮೂರೂ ಕಥೆ ಭಿನ್ನ ದಾರಿಯಲ್ಲಿಯೇ ಹೋಗುತ್ತಿವೆ. ಒಂದನ್ನು ಪಿ. ಶೇಷಾದ್ರಿ ಮತ್ತೊಂದನ್ನು ಟಿ.ಎನ್. ಸೀತಾರಾಂ, ಮೂರನೇಯದನ್ನು ನಾಗೇಂದ್ರ ಷಾ ರೂಪಿಸುತ್ತಿದ್ದಾರೆ. ನನ್ನ ಪಾತ್ರ ನಾಗೇಂದ್ರ ಷಾ ಅವರ ಟ್ರ್ಯಾಕ್‌ನಲ್ಲಿ ಬರುತ್ತದೆ. 'ಮಾಯಾಮೃಗ' ಕಥೆಯ ಭೂಮಿಕೆಯಲ್ಲೇ ಹೊಸತನ್ನು ನಿರೂಪಿಸಲಾಗುತ್ತಿದೆ. ಮೂರು ಭಿನ್ನ ಆದರೂ ಕೆಲವೊಮ್ಮೆ ಒಂದಕ್ಕೊಂದು ಸಂಧಿಸುತ್ತವೆ. ಮುಂದೆ ಇವು ವಿಲೀನವಾಗುತ್ತ ಸಾಗಬಹುದು. ಪೊಲೀಸ್ ತನಿಖೆಯ ಸಂದರ್ಭದಲ್ಲಿ ಟ್ರ್ಯಾಕ್ ಬದಲಾಗಿದೆ. ವೀಕ್ಷಕರಿಗೆ ಇದರಿಂದ ಗೊಂದಲ ಉಂಟಾಗುವುದಿಲ್ಲ.

◆ **ಧಾರಾವಾಹಿ ಎಂದರೆ ನೆಗೆಟಿವ್ ವಿಜೃಂಭಣೆ ಇರಬೇಕಾ?**

ನೆಗೆಟಿವ್ ಬೇಕು ಅಂತಾನೇ ಹೇಳಲು ಆಗುವುದಿಲ್ಲ. ಯಾರಿಗೆ ಏನು ಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ. ಇವತ್ತಿನ ಸಂದರ್ಭವೇ ಹಾಗಿದೆ ಎಂದು ಅನ್ನಿಸುತ್ತದೆ. ಈ ಬಗ್ಗೆ ಆಳವಾದ ಅನುಭವ ನನಗೂ ಇಲ್ಲ. ಒಂದು ಕಡೆ ಪಾಸಿಟಿವ್ ಇದ್ದರೆ ಮತ್ತೊಂದು ಕಡೆ ನೆಗೆಟಿವ್ ಇರುತ್ತದೆ. ಆ ಪಾತ್ರಗಳು ನಾಯಕ–ಪ್ರತಿನಾಯಕನ ಕೆಲಸ ಮಾಡುತ್ತವೆ. ಒಂದರ ಶಕ್ತಿ ಹೆಚ್ಚಿದಷ್ಟು ಮತ್ತೊಂದರ ಸಾಮರ್ಥ್ಯವೂ ಹೆಚ್ಚುತ್ತದೆ. ಜನರಿಗೆ ನೆಗೆಟಿವ್ ತೋರಿಸಿದರೆ ಕಥೆ ಮನಸಿನಲ್ಲಿ ಕೂರುತ್ತದೆ ಎನ್ನುವ ಯೋಚನೆ ಇದೆ. ನನ್ನ ಅನುಭವದಲ್ಲಿ ಹೇಳುವುದಾದರೆ ಎರಡೂ ಅಗತ್ಯಕ್ಕೆ ತಕ್ಕಂತೆ ಬೇಕಾಗುತ್ತದೆ. ನೆಗೆಟಿವ್ ಅನ್ನೋದು ನಮ್ಮ ಒಳಗಿನ ಗುಣವನ್ನೇ ತೋರಿಸುತ್ತದೆ. ಅದು ಮತ್ತೊಬ್ಬರಿಗೆ ತೊಂದರೆ ಕೊಟ್ಟರೆ ಮಾತ್ರ ಸರಿಯಲ್ಲ.

◆ **ಮಕ್ಕಳನ್ನು ಕೇಂದ್ರೀಕರಿಸಿ ಟೀವಿಯಲ್ಲಿ ಏನು ಕೊಡಬಹುದು?**

ನನ್ನ ದೃಷ್ಟಿಯಲ್ಲಿ ಮಕ್ಕಳಿಗೆ ಕಾರ್ಯಕ್ರಮ ಬರುತ್ತಿವೆ. ತೀರ ಇಲ್ಲವೇ ಇಲ್ಲ ಎಂದೇನೂ ಇಲ್ಲ. ಆದರೆ ಮಕ್ಕಳನ್ನೇ ಕೇಂದ್ರೀಕರಿಸಿ ಕಾರ್ಯಕ್ರಮ ಮುಂದೆ ಬರಬಹುದು. ರಾಮಾಯಣ ಮತ್ತು ಮಹಾಭಾರತದ ತುಂಬ ಕಥೆಗಳು ಇವೆ. ಅದರಲ್ಲಿ ಅನೇಕ ಉಪಕಥೆಗಳೂ ಬರುತ್ತವೆ. ಆ ಸನ್ನಿವೇಶವನ್ನು ಇಟ್ಟುಕೊಂಡು ಇವತ್ತಿನ ಸಂದರ್ಭಕ್ಕೆ ಹೇಗೆ ಪರಿಚಯಿಸಬಹುದು ಎಂದು ಯೋಚಿಸಬೇಕು. ಇವತ್ತಿನ ಶಾಲೆಯಲ್ಲಿ ಮಕ್ಕಳಿಗೆ ಈ ರೀತಿಯ ವಾತಾವರಣ ಇಲ್ಲ. ಮಾಡುವುದು ಇರಲಿ ಅವರಿಗೆ ನೋಡುವುದಕ್ಕೂ ಆಗುತ್ತಿಲ್ಲ. ಶಾಲೆಯ ವಾರ್ಷಿಕೋತ್ಸವ ಇಲ್ಲವೆ ಸ್ಪರ್ಧೆಗೆ ಕೆಲವೊಂದು ಶಾಲೆಯಲ್ಲಿ ಸಾಂಸ್ಕೃತಿಕ ವಾತಾವರಣ ಕಲ್ಪಿಸುತ್ತಾರೆ. ಕಲೆಯ ಬಗ್ಗೆ ಸಣ್ಣ ಪರಿಚಯವೂ ಅನೇಕ ಮಕ್ಕಳಿಗೆ ಇರುವುದಿಲ್ಲ. ರಂಗಭೂಮಿ ಸಂಬಂಧಿತ ಕಾರ್ಯಕ್ರಮ ಪರಿಚಯಿಸಬಹುದು. ಅದರಿಂದ ಹೆಚ್ಚು ಪ್ರಯೋಜನ ಆಗಬಹುದು ಎಂದು ಅನ್ನಿಸುತ್ತದೆ. ಜನಪದ ಕಲೆಯ ಪರಿಚಯ ಮಕ್ಕಳಿಗೆ ತೀರ ಕಡಿಮೆ ಆಗಿದೆ. ಹಳ್ಳಿಗಳಲ್ಲೇ ಜನಪದ ಕಲೆ ಕಾಣುವುದು ಕಷ್ಟ. ಅದನ್ನು ಉಳಿಸಿಕೊಳ್ಳುವ ಮತ್ತು ಮುಂದಿನ ತಲೆಮಾರಿಗೆ ದಾಟಿಸುವುದು ಸವಾಲು. ಅದಕ್ಕೆ ಟೀವಿ ಒಳ್ಳೆಯ ವೇದಿಕೆ ಕೂಡ ಆಗಬಲ್ಲದು.

■ **ರಾಘವೇಂದ್ರ ಕೆ.**